

ವಿಜ್ಞಾನಿಗಳ ತಂಡ ಸೃಷ್ಟಿಸಿದೆ.

ಮಂಡಿ, ಮೊಣಕಾಲು ಜೋಡಣೆ, ದೇಹದೊಳಗೆ ಸ್ಕ್ರೂ ಅಳವಡಿಕೆಗೆ ಬ್ಲಾಕ್ ಟೈಟೇನಿಯಂ ಬಳಸಲಾಗುತ್ತಿದೆ. ಇದರ ವಿಶೇಷತೆ ಎಂದರೆ ಮಾನವ ದೇಹದಲ್ಲಿ ಅಳವಡಿಸಿದಾಗ ಬ್ಯಾಕ್ಟೀರಿಯಾ ಸೋಂಕಿಗೆ ಒಳಗಾಗದು ಮತ್ತು ಮಲಿನಗೊಳ್ಳುವುದಿಲ್ಲ. ಕಪ್ಪು ಟೈಟೇನಿಯಂ ಕೇವಲ ಬ್ಯಾಕ್ಟೀರಿಯಾಗಳನ್ನು ಕೊಲ್ಲುತ್ತವೆಯೇ ಹೊರತು ದೇಹದ ಇತರ ಯಾವುದೇ ಕೋಶಗಳ ತಂಟೆಗೂ ಹೋಗುವುದಿಲ್ಲ.

‘ಕಪ್ಪು ಟೈಟೇನಿಯಂನಿಂದ ಮಾಡಿದ ನ್ಯಾನೊ ಪಿಲ್ಲರ್‌ಗಳನ್ನು ಪ್ರಯೋಗಕ್ಕೆ ಒಳಪಡಿಸಿದಾಗ ಉದರ ಬೇನೆಗೆ ಕಾರಣವಾಗುವ ಬ್ಯಾಕ್ಟೀರಿಯಾ ಇಶ್ಚರಿಯಾ ಕೋಲಿಯನ್ನು ಶೇ. 95, ಸಿಸ್ಟಿಕ್ ಫೈಬ್ರೊಸಿಸ್‌ಗೆ ಕಾರಣವಾಗುವ ಸ್ಯುಡೊಮೊನಸ್ ಅರ್ಗೂನೊಸವನ್ನು ಶೇ. 98, ಮೈಕ್ರೋ ಬ್ಯಾಕ್ಟೀರಿಯಂ ಅನ್ನು ಶೇ. 92 ಮತ್ತು ಸ್ಟೆಫಿಲೊಕೊಸ್ ಅನ್ನು ಶೇ. 22 ರಷ್ಟು ನಾಶಪಡಿಸಿತ್ತು’ ಎಂಬ ವಿವರಣೆ ಚಟರ್ಜಿ ಅವರದು.

ಮನುಕುಲದ ‘ನಂಬರ್ ಒನ್’ ಶತ್ರು ಎಂದರೆ ಬ್ಯಾಕ್ಟೀರಿಯಾ, ವೈರಸ್ ಮತ್ತು ಫಂಗೈಗಳು. ವಿವಿಧ ಬಗೆಯ ರೋಗಗಳ ವಾಹಕವಾಗಿರುವ ಬ್ಯಾಕ್ಟೀರಿಯಾಗಳಿಂದ ವಿಶ್ವದಲ್ಲಿ ಪ್ರತಿ ನಿತ್ಯ 50 ಸಾವಿರಕ್ಕೂ ಹೆಚ್ಚು ಜನ ಸಾಯುತ್ತಿದ್ದಾರೆ. ಈಗಲೂ ಬ್ಯಾಕ್ಟೀರಿಯಾ, ವೈರಸ್‌ಗಳ ನಾಶಕ್ಕೆ ವಿವಿಧ ರೀತಿಯ ರೋಗ ನಿರೋಧಕ ಔಷಧಗಳನ್ನು ಬಳಸಲಾಗುತ್ತಿದೆ. ವಿಚಿತ್ರವೆಂದರೆ, ಬಹಳಷ್ಟು ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳು ರೋಗ ನಿರೋಧಕ ಶಕ್ತಿಯನ್ನು ಬೆಳೆಸಿಕೊಂಡಿವೆ. ಹಾಗಾಗಿ ಈ ರೋಗನಿರೋಧಕ ಔಷಧಿಗಳ ಸಾಮರ್ಥ್ಯ ಹೆಚ್ಚು ಕಾಲ ಬಾಳುವುದಿಲ್ಲ. ಬ್ಯಾಕ್ಟೀರಿಯಾ, ವೈರಸ್, ಪ್ರೊಟೊಜೊನ್‌ಗಳ ಸರ್ವ ನಾಶಕ್ಕೆ ಜಗತ್ತಿನ ವಿಜ್ಞಾನಿಗಳು ಪರಿಣಾಮಕಾರಿ ಔಷಧಿ ಸಂಶೋಧಿಸಲು ಪೈಪೋಟಿಗೆ ಬಿದ್ದಿದ್ದಾರೆ. ಈ ಹೊಸ ಸಾಧನ ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಭರವಸೆಯ ಆಶಾಕಿರಣಗಳನ್ನು ಸೃಷ್ಟಿಸಿದೆ.

ಬ್ಯಾಕ್ಟೀರಿಯಾಗಳು ಮನುಷ್ಯನಿಗಿಂತ ಎಷ್ಟೋ ಪಟ್ಟು ಬುದ್ಧಿವಂತಿಕೆ ಹೊಂದಿರುವಂತೆ ಕಾಣುತ್ತದೆ. ಯಾವುದೇ ಔಷಧಕ್ಕೂ ಜಗ್ಗದೆ ನಿರೋಧಕ ಶಕ್ತಿ ಬೆಳೆಸಿಕೊಂಡು ‘ಸೂಪರ್‌ಬಗ್’ ಆಗಿ ರೂಪಾಂತರಗೊಳ್ಳುತ್ತಿವೆ. ಇದು ವಿಜ್ಞಾನಿಗಳನ್ನು ಕಾಡುತ್ತಿರುವ ಬಹುದೊಡ್ಡ ಸಮಸ್ಯೆಯಾಗಿದೆ. ಇದಕ್ಕೆ ಹೊಸ ಸಾಧನ ಪರಿಹಾರ ಒದಗಿಸಬಲ್ಲದು. ‘ಹೊಸ ಸಾಧನ ಮೊದಲ ಹಂತ ಯಶಸ್ವಿಯಾಗಿದೆ. ಮಾನವನ ಮೇಲೆ ಇನ್ನೂ ಪ್ರಯೋಗ ನಡೆದಿಲ್ಲ. ಮುಂದಿನ ದಿನಗಳಲ್ಲಿ ಕ್ಲಿನಿಕಲ್ ಪ್ರಯೋಗ ನಡೆಸುತ್ತೇವೆ’ ಎನ್ನುತ್ತಾರೆ ಪ್ರೊ.ಚಟರ್ಜಿ.

ಒಟ್ಟಾರೆ, ನ್ಯಾನೋ ಜಗತ್ತು ಅತ್ಯಂತ ನಿಗೂಢವಾದದ್ದು. ಈ ಕ್ಷೇತ್ರದ ಒಳಹೊಕ್ಕಷ್ಟೂ ಅಚ್ಚರಿಗಳು ಕಂಡುಬರುತ್ತಿವೆ. ನ್ಯಾನೋ ತಂತ್ರಜ್ಞಾನವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಜಾಗತಿಕ ಮಟ್ಟದಲ್ಲಿ ದೊಡ್ಡ ಮಟ್ಟದ ಬಂಡವಾಳ ಹೂಡಿಕೆ ಆಗುತ್ತಿದೆ. ನಮ್ಮ ಪ್ರಕೃತಿಯಲ್ಲಿ ಕಂಡು ಬರುವ ಕೆಲವು ಸಹಜ ಕ್ರಿಯೆಗಳನ್ನು ಆಧರಿಸಿಯೇ ವಿಜ್ಞಾನಿಗಳು ನ್ಯಾನೊ ಪರಿಹಾರ ಸೂತ್ರಗಳನ್ನು ಕಂಡುಹಿಡಿಯುತ್ತಿರುವುದು ಕುತೂಹಲಕರ ಸಂಗತಿಯೇ ಸರಿ.

(ಚಿತ್ರಗಳು ಕಾಲ್ಪನಿಕ)

■




# ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು



ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450